# ಗಾರ್ಡನಿಂಗ್ ಪೇರೆಂಟಿಂಗ್

## ಮಕ್ಕಳ ಮನ ಅರಳಿಸುವ ಕಲೆ



**ಮಕ್ಕಳ ಮನಸ್ಸು ಸುಂದರ ಹೂಗಳಂತೆ. ಅವರ ಮನಸ್ಸು ಅರಳಬೇಕೆಂದರೆ ಅವರ ಆರೈಕೆಯೂ ಅಷ್ಟೇ ನಾಜೂಕಾಗಿರಬೇಕು. ಮಕ್ಕಳಲ್ಲಿನ ಸಾಮರ್ಥ್ಯ, ಅನನ್ಯತೆಯನ್ನು ಗುರುತಿಸಿ ಅದಕ್ಕೆ ತಕ್ಕಂತೆ ಅವರನ್ನು ಬೆಳೆಸಲು 'ಗಾರ್ಡನಿಂಗ್ ಪೇರೆಂಟಿಂಗ್' ಪರಿಕಲ್ಪನೆ ಸಹಾಯಕ್ಕೆ ಬರುತ್ತದೆ.**

■ **ಅನಿತಾ ನಾಡಿಗ್**
ಮೈಂಡ್ ಕೋಚ್ ಮತ್ತು ಕೌನ್ಸೆಲರ್

ಈಚೆಗೆ ನಮ್ಮ ಕೌನ್ಸೆಲಿಂಗ್ ಸೆಂಟರ್‌ಗೆ ಒಬ್ಬರು ಫೋನಾಯಿಸಿದರು. 'ನನ್ನ ಮಗನಿಗೆ ಕೌನ್ಸೆಲಿಂಗ್ ಬೇಕಾಗಿತ್ತು. ಯಾವಾಗ ಬರಬಹುದು?' ಎಂದು ವಿಚಾರಿಸಿದರು. ಸಾಮಾನ್ಯವಾಗಿ, ಕೌನ್ಸೆಲಿಂಗ್ ಬೇಕು ಎಂದು ಕರೆ ಮಾಡಿದವರ ಪರಿಚಯ, ತೊಂದರೆಗಳ ಬಗ್ಗೆ ಸಂಕ್ಷಿಪ್ತವಾಗಿ ವಿಚಾರಿಸಿ ನಂತರ ಅಪಾಯಿಂಟ್‌ಮೆಂಟ್ ಕೊಡುವುದು ರೂಢಿ. ಹಾಗೆ, ಕರೆ ಮಾಡಿದವರ ಪರಿಚಯ ಹಾಗೂ ಮಗುವಿನ ವಯಸ್ಸು, ತರಗತಿ ತಿಳಿದುಕೊಂಡು ಯಾವ ಕಾರಣಕ್ಕೆ ಕೌನ್ಸೆಲಿಂಗ್ ಬೇಕೆನಿಸಿತು ಎಂದು ವಿಚಾರಿಸಿದೆ.

ಅವರ ಪ್ರತಿಕ್ರಿಯೆ ನನ್ನ ಹುಬ್ಬೇರಿಸಿತು. 'ತೊಂದರೆ ಅಂತೇನೂ ಕಂಡಿಲ್ಲ. ಮಗ ಈಗ ಹದಿಹರೆಯಕ್ಕೆ ಕಾಲಿಟ್ಟಿದ್ದಾನೆ. ಓದುವುದರಲ್ಲಿ ಅಥವಾ ನಡವಳಿಕೆಯಲ್ಲಿ ತೊಂದರೆಯೇನೂ ಅನ್ನಿಸಿಲ್ಲ. ನಮ್ಮೊಡನೆ ಸಂಕೋಚ ಅಥವಾ ಭಯವಿಲ್ಲದೆ ಅನೇಕ ವಿಷಯಗಳನ್ನು ಚರ್ಚಿಸುತ್ತಾನೆ. ಸ್ನೇಹಿತರು ಸಿಗರೇಟು ಸೇದು ಎಂದು ಬಲವಂತ ಮಾಡಿದರು, ಇನ್ಯಾರೋ ಸ್ನೇಹಿತನಿಗೆ ಒಬ್ಬಳ ಮೇಲೆ ಪ್ರೇಮವಾಗಿದೆ, ಈ ರೀತಿ ವಿಷಯಗಳನ್ನು ಸಹ ಹಂಚಿಕೊಳ್ಳುತ್ತಾನೆ. ಹದಿಹರೆಯಕ್ಕೆ ಕಾಲಿಟ್ಟಿರುವುದರಿಂದ ಅವನಿಗೆ ಏನಾದರೂ ನಮ್ಮಲ್ಲಿ ಹಂಚಿಕೊಳ್ಳಲು, ಹೇಳಿಕೊಳ್ಳಲು ಮುಜುಗರವಾಗಿರುವಂಥ ವಿಷಯವಿದೆಯೇನೋ ಅಥವಾ ಅವನ ಭವಿಷ್ಯದ ಬಗ್ಗೆ ಅವನಿಗೆ ಗೊಂದಲವಿದ್ದರೆ, ಯಾವ ಮಾರ್ಗದಲ್ಲಿ ಅವನು ಹೋದರೆ ಒಳಿತು ಎಂದು ಅವನಿಗೆ ಕೌನ್ಸೆಲರ್ ಬಳಿ ಚರ್ಚಿಸಿದರೆ ಒಳಿತೇನೋ ಎನ್ನಿಸಿತು. ನಮಗೆ ಅವನು ಇಂಥದ್ದೇ ಓದಬೇಕು, ಇಂಥದ್ದೇ ಕೆಲಸ ಮಾಡಬೇಕು ಎಂಬ ಬಯಕೆಯೇನು ಇಲ್ಲ. ಒಬ್ಬ ಒಳ್ಳೆಯ ಮನುಷ್ಯನಾಗಿ, ಪ್ರಜೆಯಾಗಿ, ಸಂತೋಷದಿಂದ ಇದ್ದರೆ ಸಾಕು' ಎಂದರು.

ಮಕ್ಕಳ ಕೌನ್ಸೆಲಿಂಗ್‌ಗೆ ಕರೆ ಮಾಡುವವರಲ್ಲಿ ಬಹುತೇಕರು, 'ಓದೋದೇ ಇಲ್ಲ, ಹೀಗಾದರೆ ಹೇಗೆ. ಈಗೆಲ್ಲ ಎಂಜಿನಿಯರಿಂಗ್ ಮೆಡಿಕಲ್ ಸೀಟ್ಸ್ ಎಷ್ಟು ದುಬಾರಿ, ಅಂಕಗಳು ಎಷ್ಟು ಬಂದರೂ ಸಾಲಲ್ಲ' ಅಂತಲೋ, 'ಹೇಳಿದ ಮಾತು ಕೇಳೋದೇ ಇಲ್ಲ. ಹೇಳಿದ್ದನ್ನೇ ಹೇಳಬೇಕು. ಶಾಲೆಯಿಂದ ಬಂದ ತಕ್ಷಣ ಕೈ ಕಾಲು ತೊಳೆದು ಓದಕ್ಕೆ ಕೂರು ಎಂದು ಎಷ್ಟು ಹೇಳಿದರೂ ಕೇಳಲ್ಲ. ಚಪ್ಪಲಿ ಸ್ಟಾಂಡ್ ಅಲ್ಲಿ ಇಡಲ್ಲ. ಬ್ಯಾಗ್ ಎಲ್ಲೋ ಬಿಸಾಕಿ ಆಟಕ್ಕೆ ಹೊರಟುಬಿಡುತ್ತೆ' ಎಂಬ ದೂರುಗಳೇ ಹೆಚ್ಚು.

ಕೆಲವರು, 'ಮೃದಂಗ ಇಷ್ಟ ಅಂತಾನೆ, ಅದರಲ್ಲೇ ಮುಂದುವರೆಯಬೇಕು, ಎಂಜಿನಿಯರಿಂಗ್ ಸೇರಿದರೆ ಮೃದಂಗ ಅಭ್ಯಾಸಕ್ಕೆ ಸಮಯವಾಗಲ್ಲ ಅಂತಿದಾನೆ, ನೀವಾದರೂ ಬುದ್ಧಿ ಹೇಳಿ' ಎಂದರೆ, ಇನ್ನೂ ಕೆಲವರು 'ಹಾಡು, ಕುಣಿತ, ನಾಟಕ ಅಂದ್ರೆ ಇವಳಿಗೆ ಮನಸ್ಸಿರತ್ತೆ. ಅದೇ ಓದು ಅಂದ್ರೆ ಆಗಲ್ಲ. ಹಾಡು ಕುಣಿತದಲ್ಲಿ ಜೀವನ ನಡೆಯತ್ತಾ ಹೇಳಿ. ಇದೇ ವಿಷಯಕ್ಕೆ ಜಗಳ ಆಗತ್ತೆ, ದೊಡ್ಡವರು ಅಂತ ಗೌರವ ಕೊಡಲ್ಲ. ಸ್ವಲ್ಪ ಇವಳನ್ನು ಬದಲಾಯಿಸಿ ಒಳ್ಳೆಯ ಬುದ್ಧಿ ಹೇಳಿಕೊಡಿ' ಎಂದೋ ಹೇಳುವವರೇ ಹೆಚ್ಚು.

ಈ ತರಹದ ಕರೆಗಳೇ ಹೆಚ್ಚು ಕೇಳಿದವಳಿಗೆ ನನ್ನ ಮಗ ಉತ್ತಮ ಪ್ರಜೆಯಾದರೆ ಸಾಕು ಎಂದು ಕರೆ ಮಾಡಿದ ತಾಯಿಯ ಬಗ್ಗೆ ಹೆಚ್ಚು ಗೌರವ, ಅಭಿಮಾನ ಮೂಡಿತು. ಜೊತೆಗೆ, ಈ ರೀತಿ ಹೆಚ್ಚು ಪೋಷಕರು ಯೋಚಿಸಿದರೆ, ಮಕ್ಕಳು ಅನುಭವಿಸುವ ಕೆಲವು ಮಾನಸಿಕ ಅನಾರೋಗ್ಯವನ್ನು ತಪ್ಪಿಸಬಹುದೆನಿಸಿತು.

ಮಕ್ಕಳ ಪಾಲನೆ ಪೋಷಣೆಯನ್ನು ಎರಡು ರೀತಿಯಾಗಿ ನೋಡಬಹುದು. ಗಾರ್ಡನಿಂಗ್ ಪೇರೆಂಟಿಂಗ್ ಹಾಗೂ ಕಾರ್ಪೆಂಟರ್ ಪೇರೆಂಟಿಂಗ್ ಎಂದು.

### ಗಾರ್ಡನಿಂಗ್ ಪೇರೆಂಟಿಂಗ್ ವರ್ಸಸ್ ಕಾರ್ಪೆಂಟರ್ ಪೇರೆಂಟಿಂಗ್

'ಗಾರ್ಡನಿಂಗ್ ಪೇರೆಂಟಿಂಗ್' – ಈ ಹೆಸರೇ ಹೇಳುವ ಹಾಗೆ ಪೋಷಕರು ಗಾರ್ಡನರ್, ಅಂದರೆ ತೋಟದ ಮಾಲಿಯ ರೀತಿ ನಡೆದುಕೊಳ್ಳುತ್ತಾರೆ. ಮಾಲಿಯ ಒಂದೇ ಧ್ಯೇಯ, ಗಿಡಗಳನ್ನು ಪೌಷ್ಟಿಕವಾಗಿ, ಆರೋಗ್ಯಕರವಾಗಿ, ಫಲ ನೀಡುವಂತೆ ಬೆಳೆಸುವುದು. ಅದಕ್ಕೆ ಏನು ಬೇಕೋ ಅದನ್ನೆಲ್ಲ ಮಾಲಿ ಮಾಡುತ್ತಾನೆ. ಮಣ್ಣು ಚೆನ್ನಾಗಿದೆಯೇ? ಅದನ್ನು ಬದಲಾಯಿಸಬೇಕೇ? ಗೊಬ್ಬರದ ಅಗತ್ಯವಿದೆಯೇ? ಹುಳಗಳು ಬಾರದ ಹಾಗೆ ಏನು ಮಾಡಬೇಕು? ಸಾಕಷ್ಟು ಬೆಳಕು, ನೀರು ಸಿಗುತ್ತಿದೆಯೇ? ಇದನ್ನೆಲ್ಲಾ ನೋಡಿ, ಗಿಡಕ್ಕೆ ಅಗತ್ಯವಿರುವ ಎಲ್ಲ ಸಂಪನ್ಮೂಲಗಳನ್ನು ಮಾಲಿ ಗಿಡಕ್ಕೆ ಒದಗಿಸುತ್ತಾನೆ. ಅಷ್ಟೇ ಅಲ್ಲ, ಗಿಡಗಳಿಗೆ ಇಷ್ಟೇ ದೊಡ್ಡ ಹಣ್ಣು ಬಿಡು ಎಂದು ಒತ್ತಾಯಿಸುವುದಾಗಲೀ, ಇಷ್ಟೇ ತರಕಾರಿ ಕೊಡಬೇಕು ಎಂದು ಒತ್ತಡವನ್ನಾಗಲಿ ಹೇರುವುದಿಲ್ಲ ಅಥವಾ ಬೈಯುವುದಿಲ್ಲ. ಬದಲು, ಯಾಕೆ ಒಳ್ಳೆಯ ಫಲ ನೀಡುತ್ತಿಲ್ಲ ಎಂದು ಯೋಚಿಸಿ, ಅದಕ್ಕೆ ಬೇಕಾಗುವ ವಾತಾವರಣವನ್ನು ತನ್ನ ಪರಿಶ್ರಮದಿಂದ ಬದಲಾಯಿಸಲು ಪ್ರಯತ್ನಿಸುತ್ತಾನೆ.